

## ಚಟುವಟಿಕೆ 14: ಹಣ್ಣುಗಳು ಮತ್ತು ತರಕಾರಿಗಳಲ್ಲಿರುವ ಮಾದರಿಗಳು

**ವಯಸ್ಸು:** 6 ವರ್ಷ ಮತ್ತು ಮೇಲ್ಪಟ್ಟವರು

**ವಸ್ತುಗಳು:** ಮನೆಯಲ್ಲಿಯೇ ಇರುವ ವಿವಿಧ ಹಣ್ಣುಗಳು ಮತ್ತು ತರಕಾರಿಗಳು, ಒಂದು ಚಾಕು, ಪೆನ್ಸಿಲ್ ಹಾಗೂ ಬಿಳಿಕಾಗದ.

**ನೆನಪಿಡಬೇಕಾದ ಅಂಶಗಳು:**

1. ನಿಮ್ಮೊಂದಿಗೆ ಕೆಲಸ ಮಾಡಲು ಕುಟುಂಬದ ಸದಸ್ಯರು ಅಥವಾ ನಿಮ್ಮ ಸ್ನೇಹಿತರನ್ನು ಆಯ್ಕೆ ಮಾಡಿಕೊಳ್ಳಿ.
2. ನಿಮ್ಮ ಮನೆಯಲ್ಲಿ ಲಭ್ಯವಿರುವ ಕೆಲವೊಂದು ತರಕಾರಿ ಅಥವಾ ಹಣ್ಣುಗಳನ್ನು ಆರಿಸಿಕೊಳ್ಳಿ.
3. ಮನೆಯಲ್ಲಿರುವ ಯಾರಾದರೂ ಹಿರಿಯರಿಗೆ ನೀವು ಆರಿಸಿಕೊಂಡಂತಹ ಹಣ್ಣು ಅಥವಾ ತರಕಾರಿಯನ್ನು ಅರ್ಧ ಕತ್ತರಿಸಲು ಹೇಳಿ ಅದರಲ್ಲಿರುವ ಮಾದರಿಗಳನ್ನು, ರೇಖೆಗಳನ್ನು, ಆಕಾರಗಳನ್ನು, ಗಮನಿಸಿ.
4. ಕತ್ತರಿಸಿದ ತುಂಡನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಕಾಗದದ ಮೇಲೆ ಚಿತ್ರಿಸಿ ಮೊದಲು ದೊಡ್ಡ ಆಕಾರಗಳೊಂದಿಗೆ ಪ್ರಾರಂಭಿಸಿ ನಂತರ ಚಿಕ್ಕ ಚಿಕ್ಕ ವಿವರಗಳನ್ನು ಸೇರಿಸಿ. ಚಿತ್ರಿಸುವಾಗ ಕತ್ತರಿಸಿದ ತುಂಡನ್ನು ಸೂಕ್ಷ್ಮವಾಗಿ ಗಮನಿಸುತ್ತಿರಿ.

5. ಹಿರಿಯರಿಗೆ ಅದೇ ತರಕಾರಿ ಅಥವಾ ಹಣ್ಣನ್ನು ಬೇರೆಯ ರೀತಿಯಲ್ಲಿ ಕತ್ತರಿಸಲು ಹೇಳಿ, ಈಗ ಕತ್ತರಿಸಿದ ಹಣ್ಣು ಅಥವಾ ತರಕಾರಿಯಲ್ಲಿ ಯಾವ ತರಹದ ಆಕಾರಗಳು, ಮಾದರಿಗಳು, ರೇಖೆಗಳು ಸೃಷ್ಟಿಯಾಗಿವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ ಚಿತ್ರಿಸಿ.
6. ಬೇರೆ ತರಕಾರಿ ಅಥವಾ ಹಣ್ಣನ್ನು ತೆಗೆದುಕೊಂಡು ಬೇರೆ ವಿಧದಲ್ಲಿ ಅದನ್ನು ಕತ್ತರಿಸಿ ಸೂಕ್ಷ್ಮವಾಗಿ ಗಮನಿಸುತ್ತಾ ಚಿತ್ರಿಸಿ. ಮೊದಲು ಕತ್ತರಿಸಿದ ಹಣ್ಣು ಅಥವಾ ತರಕಾರಿಗೂ ಈಗ ಕತ್ತರಿಸಿರುವ ಹಣ್ಣು ಅಥವಾ ತರಕಾರಿಗೆ ಇರುವ ವ್ಯತ್ಯಾಸಗಳನ್ನು ಗಮನಿಸಿ ದಾಖಲಿಸಿ.
7. ಎರಡು ಅಥವಾ ಮೂರು ವಿಭಿನ್ನ ಹಣ್ಣುಗಳು ಅಥವಾ ತರಕಾರಿಗಳನ್ನು ಚಿತ್ರಿಸಿದ ನಂತರ ನಿಮ್ಮ ಚಟುವಟಿಕೆಯ ಭಾಗಿದಾರರ ಜೊತೆ ಅವುಗಳನ್ನು ಹಂಚಿಕೊಳ್ಳಿ, ನೀವು ಗಮನಿಸಿದ ಮತ್ತು ಕಂಡುಹಿಡಿದ ಮಾದರಿಗಳನ್ನು, ರೇಖೆಗಳನ್ನು ತೋರಿಸಿ, ಅವರೊಂದಿಗೆ ಚರ್ಚಿಸಿ ಯಾವುದು ವಿಭಿನ್ನವಾಗಿತ್ತು? ಯಾವುದು ನಿಮಗೆ ಆಶ್ಚರ್ಯವನ್ನು ತಂದುಕೊಟ್ಟಿತ್ತು? ಯಾವುದನ್ನು ಚಿತ್ರಿಸಲು ನಿಮಗೆ ಸ್ವಲ್ಪ ಕಷ್ಟವಾಯಿತು? ಎಂಬುದನ್ನು ಹಂಚಿಕೊಳ್ಳಿ.

*ಆರ್ಟ್ ಸ್ಪಾರ್ಕ್ಸ್ ಫೌಂಡೇಶನ್*

ART SPARKS CURIOSITY. CREATIVITY. LEARNING.

www.art-sparks.org